ದ್ದು. ಅಂತಾ ಮಾಹೇವಾರೀ ಖಿಸ್ತುಗಳು ಡಿಪಾಜಿಟ್ ಯಿಟ್ಟು ಮೊಬಲಗಿಗೆ ನಿಸ್ಬತ್ ಯಲ್ಲದೆ ಪ್ರತ್ಯೇಕವಾಗಿ ಪಾವತೀ ಮಾಡತಕ್ಕದ್ದು. ಸದರೀ ಡಿಪಾಜಿಟ್ ಮೊಬಲಗ್ ಕಂಟ್ರಾಕ್ಟು ಪೂರೈಸತಕ್ಕ ಕಾಲದ ಆಖೈರ್ 6 ಖಿಸ್ತುಗಳಲ್ಲಿ ಸಲಿಕೆಗೆ ತೆಗದುಕೊಳ್ಳಲ್ಪಡುವದು.

4. ಕಂಟ್ರಾಕ್ಟುದಾರನು ಕೊಡತಕ್ಕ ಮಾಹೇವಾರೀ ಖಿಸ್ತುಗಳ ಮೇಲೆ, ಲೋಕಲ್ ಸೆಸ್ಸು ವಿಧಿಸಲ್ಪಟ್ಟ ದರ ಪ್ರಕಾರ ಕಟ್ಟಲ್ಪಡುವದು.

5 ಕ್ರಮವಾಗಿ ಯಿರಡು ತಿಂಗಳಲ್ಲಿ ಸದರೀ ಖಿಸ್ತು ಕೊಡಲಿಕ್ಕೆ ತಪ್ಪಿದರೆ ಯಾ ಲಿಡ್ತೀ ಉಂಟಾದರೆ, ಸದರೀ ಕಂಟ್ರಾಕ್ಟು ರದ್ದು ಮಾಡಲ್ಪಡಲಿಕ್ಕೆ ಗುರಿಯಾಗಿ ಹಾಗೆ ತಪ್ಪುವ ದರಖಾಸ್ತುದಾರನಿಗೆ ನುಕ್ಸಾನಕರವಾಗಿ ಡಿಪಾಜಿಟ್ ಮೊಬಲಗಿನ ನಿಮಿತ್ಯ್ವಾ ವಿಲ್ಲದೆಯೇ ಪುನಃ ಹರಾಜ್ ಹಾಕಲ್ಪಡುವದು. ಸದರೀ ಡಿಪಾಜಿಟ್ ಮೊಬಲಗ್ ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಡುವದು.

L. RICKETTS,
Offg. Dy. Commr.

Notice of an application by Mallaiya for a certificate under Act XXVII of 1860.

ಬೆಂಗಳೂರು ಡಿ॥ ಡಿ॥ ಕಮ್ಮಿಷನರವರ ಕೋರ್ಟಿನಿಂದ.

1876ನೇ ಇಸವಿ ಸಿವಿಲ್ ಮಿಸಲೇನಿಯಸ್ ನಂಬರ್ 92.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ತಾಲ್ಲೂಕು ಕೆಂಪೇರೆಯಲ್ಲಿ ಇರುವ ಷಂಬು ನಾಗಯ್ಯನ ಮಗ ಮಲ್ಲಯ್ಯ ತನ್ನ ತಂಪೆ ನಾಗಯ್ಯನ ಲೇಣಿ 3000 ರೂಪಾಯಿಗಳು ಬರಮಾಡಿಕೊಳ್ಳತಕ್ಕ ಬಗ್ಗೆ ಸ್ಯ 1860ನೇ ಇಸವೀ 27ನೇ ಆಕ್ಟ್ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟರುವ ಅಪ್ಲಿಕೇಷನ್ 1877ನೇ ಇಸವೀ ಜನವರಿ ತಿಂಗಳು 22ನೇ ತಾರೀಖು ದಿವಸ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡತ್ತೆಯಾಗಿ ಆ ಮೊಬಲಗ್ ಮೇಲೆ ಹಕ್ಕು ಳ್ಳವರು ಸದರೀ ಟೈಮಿಗೆ ಹಾಜರಾಗಿ ತನ್ನ ಹಕ್ಕನ್ನ ಸ್ಥಾಪಿಸಿಕೊಡಬಹುದು.

ಬತಾರೀಖು 21ನೇ ಮಾಹೇ ಡಿಸಂಬರ್ 1876ನೇ ಇಸವೀ.

Notice under Section 416 of the Code of Criminal Procedure.

ಕ್ಲೋಸ್‌ಪೇಟೆ ಸಬ್ ಡಿವಿಜನ್ ಅಸಿಸೆಂಟ್ ಕಮ್ಮಿಷನರವರ ಕೋರ್ಟಿನಿಂದ

ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ 416ನೇ ಸೆಕ್ಷನ್ ಪ್ರಕಾರ ಕೊಡಲ್ಪಟ್ಟ ಇಸ್ತಿಹಾರ್.

ಕ್ಲೋಸ್‌ಪೇಟೆ ತಾಲ್ಲೂಕು ಹುಣಸನಹಳ್ಳಿ ಪಟೇಲ್ ಕೆಂಪೇಗೌಡನ ವಜೇಲಿ ನಡದ ಕನ್ನಚೋರಿ ಮೊಕದ್ದಮೂ ಮಾಲ್ ಪತ್ತೆಗೋಸ್ಕರ ವಜಳವಳ್ಳಿ ತಾಲ್ಲೂಕು ಗೊಲ್ಲಹಳ್ಳಿ ಗ್ರಾಮಕ್ಕೆ ಹೋಗಿ ಯಿದ್ದ ಕ್ಲೋಸ್‌ಪೇಟೆ ತಾಲ್ಲೂಕು ಪೋಲಿಸ್ ಯಿನ್ಸ್ಪೆಕ್ಟರವರ ವಕ್ಕೆ ಖೈದಿ ಮಯಿಯನ ಮಗಳು ಮುದ್ದಿಯಂಬವಳು ತನ್ನ ತಂಡೆ ಮಯಿಯನು ಕ್ಲೋಸ್‌ಪೇಟೆ ತಾಲ್ಲೂಕು ಕುರಬರಹಳ್ಳಿಯಲ್ಲಿ ಚೋರಿಮಾಡಿ ತಂದಿದ್ದಾಗಿ ಹೇಳಿಕೊಂಡು ತನ್ನವಕ್ಕೆ ಕೊಟ್ಟಿದ್ದಾನೆಂದು ಹೇಳಿಕೊಟ್ಟಿದ್ದೆಂಬ ಮಾಲ್‌ಗಳ ತಪಸೀಲ್ ಬಾಜಾದಲ್ಲಿ ನಮೂದುಮಾಡಿದೆ. ಈ ಮಾಲ್‌ಗಳು ಕ್ಲೋಸ್‌ಪೇಟೆ ತಾಲ್ಲೂಕು ಥರ್ಡ್ ಕ್ಲಾಸ್ ಮಾಜಿಸ್ಟ್ರೇಟ್ ಕೋರ್ಟ್ ನಲ್ಲಿ ಅಮಾನತ್ ಯಿದೆಯಾಗಿ ಯಿದರ ಮಾಲೀಕರು ಗೊತ್ತಾಗಲಿಲ್ಲವೆಂದು ಇನ್ಸ್ಪೆಕ್ಟರ್ ರಿಪೋರ್ಟು ಮಾಡಿದ್ದಾರಾದ್ದರಿಂದ ಈ ತಾರೀಖು ಲಗಾಯತು ಆರು ತಿಂಗಳ ವಳಗಾಗಿ ಯಿದರ ಮಾಲೀಕರು ಯಾರಾದರು ಯಿದ್ದಲ್ಲಿ ಕ್ಲೋಸ್‌ಪೇಟೆ ಥರ್ಡ್ ಕ್ಲಾಸ್ ಮಾಜಿಸ್ಟ್ರೇಟರ ಕೋರ್ಟು ರೂಬರೂ ಹಾಜರಾಗಿ ಅವರ ಹಕ್ಕು ಸ್ಥಿರಪಡಿಸಿಕೊಡಬೇಕು. ಹಾಗೆ ಮಾಡದೆ ಯಿದ್ದರೆ ವಾಯಿದೆ ಪೂರೈಸಿದ ಬಳಿಕ ಈ ಮಾಲ್‌ಗಳನ್ನ ಸರಕಾರಕ್ಕೆ ದಾಖಲ್‌ಮಾಡಿ ಕೊಳ್ಳಲ್ಪಡುತ್ತೆ.

ಬತಾರೀಖು 15ನೇ ಮಾಹೆ ಡಿಸಂಬರ್ 1876ನೇ ಇಸವಿ.

A. W. C. LINDSAY,
Ag. Dy. Commr.

KOLAR DISTRICT.

Notice of an application by Nanjunda for a certificate under Act XXVII of 1860.

ಕೋಲಾರ ಡಿ|| ಜೆ| ಕಮ್ಮಿಷನರವರ ಕೋರ್ಟಿನಿಂದ.

ನಂ| 84.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕಬಳ್ಳಾಪುರದಲ್ಲಿ ಯಿರುವ ಜಜಾಂ ನಂಜುಂಡ ನೆಂಬವನು ಪೂತೀಪಟ್ಟು ತನ್ನ ತಂದೆ ಬಿಲ್ಲ ಪಾಪಣ್ಣನಿಗೆ ಬರತಕ್ಕ ಪುದ್ರೀ ಬಾಕೀ 950 ರೂಪಾಯಿಗಳು ವಸೂಲ್‌ಮಾಡಿ ಕೊಳ್ಳಲು 1860ನೇ ಇಸವೀ 27ನೇ ಆಕ್ಟ್ ಪ್ರಕಾರ ತನ್ನ ಹೆಸರಿಗೆ ವಾರಸ್ ಸರಟಿಫಿಕೇಟ್ ಕೊಡಿಸಿ ಕೊಡಬೇಕೆಂದು ಗುಜರಾಯಿಸಿದ ಅರ್ಜೀಯು, ಸ|| 1877ನೇ ಇಸವೀ ಫಿಬ್ರವರಿ 15ನೇ ತಾರೀಖಿನಲ್ಲಿ ವಿಚಾರಿಸಲ್ಪಡುತ್ತಾಗಿ ಯಿದರ ಮೇಲೆ ಯಾರಿಗೆ ಯಾವ ವಿಧವಾದ ಬಾಧ್ಯತೆ ಯಿದ್ದಾಗ್ಯೂ ಆ ತಾರೀಖಿಗೆ ಸರಿಯಾಗಿ ಕೋರ್ಟು ರೂಬರೂ ಹಾಜರಾಗಿ ವಿಸಿತಕ್ಕದ್ದಾಗಿರುತ್ತೆ.

ಬತಾರೀಖು 21ನೇ ಮಾಹೇ ಡಿಕಂಬರ್ 1876ನೇ ಇಸವೀ ಪೊಕ್ಕ್ಯಾಂ ಕೋಲಾರ.

S. VENKAT VARDAIENGAR,
Ag. Dy. Commr.

TUMKUR DISTRICT.

Notice of an application by Venkatamma for a certificate under Act XXVII of 1860.

ತುಮಕೂರು ಡಿ|| ಜೆ| ಕಮ್ಮಿಷನರ್ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧಪಡಿಸುವದೇನಂದರೆ,—ತುಮಕೂರು ತಾಲ್ಲೂಕು ಕಸಬಾ ತುಮಕೂರು ಗ್ರಾಮದ ವಾಸಸ್ಥನಾಗಿ ಯಿದ್ದ ಪೂತೀಯಾದ ಜೂ|| ಗು|| ನರಸಿಹ್ಮಾಚಾರಿ ಯಂಬುವನಿಗೆ ಯಿತರರಿಂದ ಬರಬೇಕಾಗಿ ಯಿರುವ 1000 ರೂ ಪಾಯಿಗಳು ವಸೂಲ್‌ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಲಿಕ್ ಪ್ರಕಾರ ಸರಟಿಫಿಕೇಟ್ ಅಪೇಕ್ಷಿಸಿ ಈತನ ಹೆಂಡತಿ ವೆಂಕಟಮ್ಮ ಯಂಬುವಳು ದಾಖಲ್‌ಮಾಡಿ ಯಿರುವ ಅರ್ಜೀಯನ್ನು 1877ನೇ ಇಸವಿ ಜನವರೀ ತಿಂಗಳು 22ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ ಯಿದಕ್ಕೆ ತಕರಾರು ಮಾಡುವರ್ಯಾರಾದರೂ ಯಿದ್ದರೆ ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 11 ಘಂಟೆಗೆ ಹಾಜರಾಗಬೇಕಾಗಿ ಯಿರುತ್ತೆ.

ತಾರೀಖು 9ನೇ ಮಾಹೆ ಡಿಕಂಬರ್ 1876ನೇ ಇಸವಿ ಪೊಕ್ಕ್ಯಾಂ ತುಮಕೂರು.

ಈ ಕೆಳಗೆ ಸಮೂದಾಗುವ ಆಸಾಮಿಗೆ 1860ನೇ ಇಸವಿ 27ನೇ ನಂಬರ್ ಆಕ್ಟು ಅನುಸರಿಸಿ ಕೊಡಲ್ಪಟ್ಟ ಸರಟಿಫಿಕೇಟನ್ನು ಸದರಿಯವನು ವಾಯಿದೆಗೆ ಸರಿಯಾಗಿ ಸದರೀ ಸರಟಿಫಿಕೇಟಿನ ಆಧಾರದ ಮೇಲೆ ವಸೂಲ್ ಮಾಡಿದ ಹಣಗಳಿಗೆ ವಾಯಿದೆಗೆ ಸರಿಯಾಗಿ ಲೆಕ್ಕಗಳನ್ನ ಹಾಜರ್ಮಾಡದ ಸಬಬು ಇದರಿಂದ ರದ್ದು ಮಾಡಿರುತ್ತೆ.

1874ನೇ ಇಸವಿ ನವಂಬರ್ 12ನೇ ತಾರೀಖಿನಲ್ಲಿ ಕಡಬ ತಾಲ್ಲೂಕು ಲಿಂಗಂಣನಿಗೆ.

ತಾರೀಖು 6ನೇ ಡಿಕಂಬರ್ 1876ನೇ ಇಸವಿ ಪೊಕ್ಕ್ಯಾಂ ತುಮಕೂರು.

C. MADAIYA,
For Offg. Dy. Commr.

Notice of an application by Hutchavirashetti for a certificate under Act XXVII of 1860.

ನಂ|| 26.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧಪಡಿಸುವದೇನಂದರೆ,—ಕೂನ್ನವಳ್ಳೀ ತಾಲ್ಲೂಕು ಮೈಲನಹಳ್ಳಿ ಗ್ರಾಮದ ವಾಸಸ್ಥನಾಗಿಯಿದ್ದ ಪೂತೀಯಾದ ಚಿಕ್ಕ ದೊಡ್ಡಯ್ಯಕೆಟ್ಟಿ ಎಂಬವನಿಗೆ ಇತರರಯಿಂದ ಬರಬೇಕಾಗಿಯಿರುವ 1000 ರೂಪಾಯಿಗಳು, ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವೀ 27ನೇ ಆಕ್ಟ್ ಪ್ರಕಾರ ಸರಟಿಫಿಕೇಟು ಅಪೇಕ್ಷಿಸಿ, ಇವನ ಮಗ ಹುಚ್ಚವೀರಕೆಟ್ಟಿ ಎಂಬವನು ದಾಖಲ್ ಮಾಡಿ ಇರುವ ಅರ್ಜೀಯನ್ನು 1877ನೇ ಇಸವೀ ಜನವರೀ ತಿಂಗಳು 30ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ ಇದಕ್ಕೆ ತಕರಾರು ಮಾಡುವರ್ಯಾರಾದರೂ ಇದ್ದರೆ, ಈ ಕೋರ್ಟು ರೂಬರೂ ಸದರೀ ತಾರೀಖುದಿವಿ 11 ಘಂಟೆಗೆ ಹಾಜರಾಗಬೇಕಾಗಿ ಇರುತ್ತೆ.

ತಾರೀಖು 27ನೇ ಮಾಹೇ ಡಿಕಂಬರ್ 1876ನೇ ಇಸವೀ ಪೊಕ್ಕ್ಯಾಂ ತುಮಕೂರು.

T. E. WOODCOCK,
For Offg. Dy. Commr.

59

HASSAN DISTRICT.

Notice of sale of the undermentioned coffee land, the same having been cultivated without permission.

ಹಾಸನ ಡಿಸ್ಟ್ರಿಕ್ಟ್ ಡೆ| ಕ॥ ಕಚ್ಚೇರಿಯಿಂದ.

ಸಮಸ್ತ ಜನರಿಗೂ ಇದರಿಂದ ತಿಳಿಯಪಡಿಸುವದೇನಂದರೆ,—ಮಂಜರಾಬಾದ್ ತಾಲ್ಲೂಕು ಯಸಳೂರು ಹೋಬಳಿ ಹೆರೂರು ಗ್ರಾಮಕ್ಕೆ ಸೇರಿದ ಈ ಕೆಳಗೆ ನಮೂದಾಗಲ್ಪಡುವ ಬಗ್ ಹುಕ್ಕುಂ ಕಾಫೀ ಸಾಗುವಳೀ ಆಗಿರತಕ್ಕ ಜಂಗಲ್ ಜಮೀನಿನ ಹಿಡುವಳಿಯು ಹಕ್ಕನ್ನು ಕಾಫೀ ಸಾಗುವಳಿಗೋಸ್ಕರ ಮುಂದೆ ಯಿರ್ವಾಹಾಗುವ ನಿಬಂಧನೆ ವಳಗಾಗತಕ್ಕದ್ದೆಂಬ ಷರತ್ತಿನ ಮೇಲೆ ಟೆಂಪರರಿಯಾಗಿ ಬರುವ ಸ॥ 1877ನೇ ಇಸವಿ ಫಿಬರವರಿ ತಾರೀಖು 5ನೇ ಹಗಲು 11 ಘಂಟೆ ಲಗಾಯತು 4 ಘಂಟೆ ವರಿಗೂ ಅದೇ ಸ್ಥಳದಲ್ಲಿ ಹರಾಜು ಹಾಕಿಸಲ್ಪಡುತ್ತೆ ಯಿಚ್ಛಿಸುವುಳ್ಳ ಜನರು ಆ ಕಾಲದಲ್ಲಿ ಜಡ್ ದರಖಾಸ್ತು ಮಾಡಿ ಪಡೆಯಬಹುದು.

ಹರಾಜಿನ ನಿಬಂಧನೆಗಳನ್ನು ಹರಾಜು ಮಾಡಿಸುವ ಆಫಿಸರು ಆ ಕಾಲದಲ್ಲಿ ಕೂಡಿದ ಜನರಿಗೆ ರೂಬರೂ ತಿಳಿಸ್ಯಾರು.

ಸ॥ 1877ನೇ ಇಸವಿ ಜನವರೀ ತಾರೀಖು 30ರವರಿಗೂ ಯಿದಕ್ಕಾಗಿ ದರಕಾಸ್ತು ಮಾಡುವದಕ್ಕೆ ಅಪೇಕ್ಷೆಯುಳ್ಳವರು ನಮ್ಮ ಆಫಿಸಿನ ಹೆಸರಿಗೆ ದರಖಾಸ್ತು ಬರದುಕೊಳ್ಳುತ್ತಾ ಬರಬಹುದು.

ಆದರೆ ಅಂಥಾ ದರಖಾಸ್ತುದಾರ್ರು ಹರಾಜು ಸ್ಥಳದಲ್ಲಿ ಆ ಕಾಲದಲ್ಲಿ ಹಾಜರ್ ಯಿರಬೇಕು, ತಪ್ಪಿದರೆ ಅಂತಾವರ ದರಖಾಸ್ತನ್ನ ಮಂಜೂರ್ ಮಾಡತಕ್ಕ ಅಥವಾ ತಿರಸ್ಕರಿಸುವ ಅಧಿಕಾರವು ಡಿಪ್ಯೂಟಿ ಕಮ್ಮಿಷನರವರದಾಗಿದೆ.

ಧೂಪದ ಮರದ ಕುಮರಿ ಯಂಬದಾಗಿಯೂ ತಿಂಮಲ್‌ಗೌಡನ ಹನಾಲ್ ಯಂಬದಾಗಿಯು ಹೆಸರು ಹೇಳತಕ್ಕ ಪ್ರದೇಶ.

ಯಿದರ ಬಕ್ಕುಬಂದಿ.

ಪೂರ್ವಕ್ಕೆ—ದಿಣ್ಣೆ ಅಂದರೆ ಸಂಪಿಗೆ ಮರದ ಕೂಲು ದಿಣ್ಣೆ.

ದಕ್ಷಿಣಕ್ಕೆ—ದನತಿರಗುವ ದಾರಿ ಯಂದರೆ ಹೆರೂರು ಗ್ರಾಮದ ದನ ಮೇಯುವದಕ್ಕೆ ಪಟ್ಟಕ್ಕೆ ಹೋಗುವ ದಾರಿ.

ಪಶ್ಚಿಮಕ್ಕೆ—ದಿಣ್ಣೆ ಯಂದರೆ ಹೊನ್ನೇಮರದ ಕೂಲು ದಿಣ್ಣೆ.

ಉತ್ತರಕ್ಕೆ—ನೀರು ಹರಿಯುವ ಹಳ್ಳ ದಾರಿ ಯಂದರೆ ಪಪೇಗೌಡನ ಮಗ ಬಸವೇಗೌಡನಿಗೆ ಸೇರಿ ಯಿರುವ ಬೆಟ್ಟದ ಗದ್ದೇ ಹಜ್ಜು ತಲೆಕಟ್ಟು ಯಂಬ ಕಾಫಿ ತೋಟದ ವತ್ತು ನೀರು ಹರಿಯುವ ಹಳ್ಳಾ ದಾರಿ ಸಹಾ ಯಿರುತ್ತೆ.

ಈ ಮಧ್ಯೆ ಅಳತೆ ಪೂರ್ವ ಪ್ಶ್ಚಿಮ ಗಜ 77 ದಕ್ಷಿಣೋತ್ತರ ಗಜ 224 ಸಲೆಗಜ 17248ಕ್ಕೆ ಎಕರೆ 3, ರೋಡ್ 2, ಫೋಲ್ 10, ಗಜ 5½.

ಫಲ ಬರತಕ್ಕ ಕಾಫೀಗಿಡ 150 ಸೊಪಿಗಿಡಗಳು 500 ಸಹ ಯಿರುತ್ತೆ.

Notice of application by Rama Rao for a duplicate coffee patta.

ಸಮಸ್ತ ಜನರಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಲೇಟೆ ಮುಕಾರಾಜನ ದುರ್ಗತಾಫ್ಲೂಕಿಗೆ ಸೇರಿಯಿದ್ದದ್ದು ಹಾಲೀ ಮುಜರಾಬಾದು ತಾಲ್ಲೂಕಿಗೆ ಸೇರಿಯಿರುವ ಈ ನೋಟಿಸ್ ಸಂಗಡ ಸೇರಿಸಿ ಯಿರತಕ್ಕ ಪ್ಲೇಟ್‌ಪೆಂಟೆನಲ್ಲಿ ಕಂಡ ಕಾಫೀತೋಟಗಳಂಬ ಆಸಿಗಳು ಮುಜೀ ರಿಜಮಿಂಟೆಂಡರ್ ವೆಂಕಟರಾವು ರಣನವರೆ ಯವರ ಹೆಸರಿಗೆ ಪಟ್ಟೇಯಿದ್ದ ಹಾಗೂ ಅವರು ಫವತೀ ಆದನಂತರ ಅವರಿಗೆ ಖಾನಾ ತಂನುಂದರಾದ ರಘೆನಾಥರಾವು ರಣನವರೆ ಯವರಿಗೆ ಸದರೀ ಸ್ವತ್ತಿನ ಸ್ವಾಧೀನತೆ ಬಂದಹಾಗೂ ಯಿವರುನ್ನೂ ಸಂತತಿ ಯಿಲ್ಲದೆ ಗತಿಹೋಗಿ ಹೆಂಡತಿಯಾದ ಲಕ್ಷಂಬಾಯಿ ಪುರಪ್ ಜೇಬೆಬಾಯಿ ಯಂಬುಃಕೆಗೆ ಸ್ವಾಧೀನಕ್ಕೆ ಬಂದಹಾಗೂ ಈಕೆಯು ಕೆಲವು ಕಾಲ ಅನುಭವಿಸಿದ ಬಳಿಕ ಈ ಆಸ್ತಿಗಳ ಮೇಲೆ ಯಿದ್ದ ಸಾಲವನ್ನ ತೀರಿಸುವ ವುದ್ದಿಶ್ಯವಾಗಿ ಮೇಲೆ ಹೇಳಲ್ಪಟ್ಟ ಸ್ವತ್ತುಗಳನ್ನ ತಮಿಗೆ 40 ಸಾವಿರ ರೂಪಾಯಿಗಳಿಗೆ ಕ್ರಯ ಮಾಡಿ ಆ ಬಗ್ಗೆ ದಸ್ತೈವಜನ್ನ ಬರಸಿಕೊಟ್ಟು ಯಿದ್ದಾರೆಂತಲೂ ಅದು ಜಾರೀಯಲ್ಲಿರುವ ಖಾನೂನು ಅನುಸರಿಸಿ ರಿಜಿಸ್ಟರ್ ಆಗಲ್ಪಟ್ಟು ಯಿದೆಯಾಗಿ, ಸದರೀ ಕಾಫೀ ತೋಟಗಳಿಗೆ ಪ್ರೋರಿಜನಲ್ ಪಟ್ಟೆಗಳು ಯಲ್ಲೋ ಗೈರ್ವಿಲಿಯಾಗಿ ಹೋಗಿರುವದ್ದರಿಂದ ಪ್ರೊಪ್ರಿಕೇಪಿ ಪಟ್ಟೆಗಳನ್ನ ತಮ್ಮ ಹೆಸರಿಗೆ ಟ್ರಾನ್ಸ್‌ಫರ್ ಮೂಲಕ ಕೊಡಿಸಬೇಕೆಂಬ ವಿವರಗಳ್ಳಾಗಿ ಶಿವಮೊಗ್ಗಾ ಇಷ್ಟ್ರಿಕ್ಟ್‌ನಲ್ಲಿರುವ 3ನೇ ರಿಜಮಿಂಟೆಧಾರ್ರು ರಾಮರಾವ್ ರಣನವರೆಯವರು ಆ ಬಾಬತು ಅಸಲ್ ದಸ್ತೈವಜು ಮುಂತ್ತಾಗಿನಿಜಿ ಕ್ರಮಪ್ರಕಾರ ಅಪ್ಲಿಕೇಷ್ಟ ಮಾಡಿಕೊಂಡು ಯಿದ್ದಾರಾದ್ದರಿಂದ, ಯಿದರ ಮೇಲೆ ನ್ಯಾಯವಾಗಿ ಆಕ್ಷೇಪಣೆ ಮಾಡತಕ್ಕವರು ಯಾರಾದರೂ ಯಿದ್ದರೆ ಅಂತಾವರು ಈ ನೋಟೀಸ್ ತಾರೀಖು ಲಗಾಯತು 1½ ತಿಂಗಳು ವಳಗಾಗಿ ಡಿಸ್ಟ್ರಿಕ್ಟ್ ಮೆಜಿಸ್ಟರ್ ಕಾಫೀ ಇಂ॥ ಫಸ್ಟ್ ಅ॥ ಕಮ್ಮಿಷನರವರ ಮುಂದೆ ಹಾಜರಾಗಿ ಕ್ರಮಪ್ರಕಾರ ಬರ್ಯಾ ಮಾಡಿ ಕೊಳ್ಳಬಹುದು.

ಈ ನಿಬಂಧನೆಗೆ ತಪ್ಪಿ ಬಳಿಕ ಈ ಭಾಗದಲ್ಲಿ ಫಿರಿಯಾದನ್ನು ತಂದದ್ದಾದರೆ ಅದು ಯೆಷ್ಟುಮಾತ್ರಕ್ಕೂ ಮಂಜೂರಾಗಲರಿಯದು.

ಬತಾರೀಖು 23ನೇ ಮಾಹೇ ಡಿಸಂಬರ್ ಸ॥ 1876ನೇ ಇಸವೀ ಮೊಕ್ಕಾಂ ಹಾಸನ.

ಕಾಫೀವಟ್ಟೆ ರಿಜಿಸ್ಟ್ರೇಬುಕ್ಕಿನ ಯಿಕ್ಸ್ಟ್ರಾಕ್ಟ್ ತಾಲ್ಲೂಕು

ಪಟ್ಟೆ ನಂಬರ್	ಪಟ್ಟೇದಾರ್ರ ಹೆಸರು	ಪಟ್ಟೆಯಲ್ಲಿ ಕಂಡ ಪಟ್ಟೇಗಳ ಹೆಸರು	ಗ್ರಾಮದ ಹೆಸರು	ಹೋಬ್ಳಿ ಹೆಸರು	ಜಮೀನಿನ ಚಕ್ಕುಬಂದಿ
48	ಮರಳವಾಡಿ ಕೃಷ್ಣರಾವ್ ಪುಜ್ಯೇ ಯಿತಾಫೆ	ಬೀರನಮುಂಡಿಗೆ	ಗೋಣಗೊಂಡೆಬಳಗೋಡು		ಪೂರ್ವಕ್ಕೆ ವೂರುದನ ತಿರುಗುವ ಪೋಣಿ ಹೊಟ್ಟಗೆರೆ ವಳಗೆರೆ ಚೊಕ್ಕಬಸೀಮರ ವಗ್ಗರೆ ಪಶ್ಚಿಮಕ್ಕೆ ಕೊಲ್ಲಿಳಿ ಯಿವಾಂನಾಬಿ ಜಂಟಿತೋಟಕ್ಕೆ ಪೂರ್ವ ಯಿರುವ ಹೊಲೇರಗುಡ್ಡಕ್ಕೆ ಹೋಗುವ ದಾರಿ ದಕ್ಷಿಣಕ್ಕೆ ಹೊರಯ್ಯಲ್ ಅಗಳು ಪುತ್ತರಕ್ಕೆ ನಿಂನ ಹಳೇತೋಟದ ಅರಗಿನಲ್ಲಿರುವ ಹೊಲೇರ ಗುಡ್ಡದ ದಾರಿ ವಗ್ಗೆರೆ
56	ಡಿಟೋ	ಗ್ರಾಮಕ್ಕೆ ಪಶ್ಚಿಮ ದಿಕ್ಕಿನ ಪುಜ್ಯೇ	ಡಿಟೋ	ಡಿಟೋ	ಪಶ್ಚಿಮಕ್ಕೆ ಬಗತನಪುರದ ಪಳಗದ್ದೆ ವೆಂಕಟಪ್ಪನ ಹೊಲಾ ಈಮಧ್ಯದಲ್ಲಿ ವೆಂದು ಯಿಪ್ಪೇಸೋಯಿಧೆ ಪುತ್ತರಕ್ಕೆ ವೆಂಕಟಪ್ಪನ ತೋಟದ ಬೇಲಿಹೊಲಗೇರಿ ದಾರಿ ಪೋಟು ಪೂರ್ವಕ್ಕೆ ಶಾನುಭೋಗ ರಾಮೈಯ ಬೆನ್ನಹಳ್ಳಿ ಬಸವ ರಾಮೈಯ ತಮ್ಮ ನಂಜಪ್ಪನ ತೋಟ ವೀರೇಗೌಡನ ತೋಟ ಪಟ್ಟಸ್ವಾಮಿ ಗೌಡನ ಹೆಂಡತಿ ಗೌರೀ ಯಿವಳ ಮಗ ಈರಪ್ಪ ಇವರಗಳ ತೋಟಗಳ ಪೈ ರಾಮೈಯ ಬೆನ್ನಹಳ್ಳಿ ಬಸವಾ ನಂಜಪ್ಪ ಯಿವರ ತೋಟದ ಬೇಲಿ ನಂಜಪ್ಪನ ತೋಟದ ಮೂಲೆ ಲಾಗಾಯಿತು ಈರೇಗೌಡನ ಪುಟ್ಟಸ್ವಾಮೇಗವುತ ಯಿವರಗಳ ತೋಟದ ಮಧ್ಯದ ಪೂರ್ ಅಗಳು ದಕ್ಷಿಣಕ್ಕೆ ಬಗತನಪುರಕ್ಕೆ ಹೋಗುವ ದಾರಿ, ಯಿಸಳೆ ಸಾಬರ ಯಿವಾಂನಾಬಿ ತೋಟದ ಬೇಲಿಗೋರೂರು ಸೈಯದ್ ಮೊಹದೀನ್ ಸಾದರೀ ಯಿಸಪ್ಪಸಾಬಿ ಗಫೂರಸಾಬಿ ಯಿವರತೋಟದ ಬೇಲೀದಾರೀ ಸಹ
8	ಕಾಗನೂರುಚಿಕ್ಕ ಹನುಮೇಗವೆಡ	ಬಸವ ನಹರೆವುಜ್ಯೇ	ಕುಡದಲೆ	ಮುತ್ತಿಗೆ ಕಾಗನೂರು	ಪೂರ್ವಕ್ಕೆ ಮೆಣಸಮಕ್ಕಿಕೆರೆ ದಕ್ಷಿಣಕ್ಕೆ ಕಲ್ಲುಮರಟಿ ಹರಗಾಡು ಪಶ್ಚಿಮಕ್ಕೆ ಪುತ್ತರಕ್ಕೆ ಸಹಾದಾರಿ.

ಮಹಾರಾಜನ ದುರ್ಗ, ಡಿಸ್ಟ್ರಿಕ್ಟ್ ಹಾಸನ.

ಪಟ್ಟೆಯ ಸಾಲ್ ಮೂಹೆ ತಾರೀಖು.	ಜಮೀನಿನ ವಿಸ್ತೀರ್ಣ.				ಷರಾ.
	ಸೀಮೆ.	ಕೋಡಿ.	ಪೈಲ್.	ಗುಂ.	
ಸ್ ೧೮೬೦ನೇ ಇಸವಿ ಮೇ ತಾರೀಖು 6.	29	2	23	24¼	ಸ್ ೧೮೬೩ನೇ ಇಸವೀ ಫಿಬ್ರವರೀ 16ನೇ ಮು॥ ಮಹಾರಾಜನದುರ್ಗ ತಾಲ್ಲೂಕು ಅಮಿಲರ ಜೋಂದು 32ನೇ ನಂಬರು ಅರ್ಜೀಪ್ರಕಾರ ಈ ಪಟ್ಟೇದಾರ್ರು ಮನವೇಅರ್ಜೀ ಮೇರೆ ಮಾಜೀ ರಿಜಿಮಾಂಟ್‌ದಾರ್ರು ವೆಂಕಟರಾವ್ಬರಣನವರೆ ಯವರಿಗೆ ವರ್ಗಮಾಡಲ್ಪಟ್ಟು ಇದೆ
ಸ್ ೧೮೬೨ನೇ ಇಸವಿ ಕಪ್ಟಂಬರ್ ತಾರೀಖು 22.	80	..	25	28¼	ಡಿಟೋ ಡಿಟೋ
ಸ್ ೧೮೬೨ನೇ ಇಸವಿ ಜುಲೈ ತಾರೀಖು 6.	6	2	1	9¾	ಈ ಪಟ್ಟೇದಾರನು ಇದರಲ್ಲಿ ಕಂಡ ಪ್ರದೇಶವನ್ನು 62½ರೂ ಪಾಯಿಗೆ ಮಾಜೀ ರಿಜಿಮಾಂಟ್‌ದಾರ್ರು ವೆಂಕಟರಾವ್ಬರಣನವರೆ ಯವರಿಗೆ ಖರೀದಿಗೆ ಕೊಟ್ಟು ಇರುವ ದಾಗಿಯೂ ಅವರ ಹೆಸರಿಗೆ ಪಟ್ಟೆ ಆಗಬಹುದೆಂತಲೂ ಅಪೇಕ್ಷೆಕೆ ಇದ್ದಾನೆ. ಈ ಮೇರಿಗೆ ಖರೀದಿಗೆ ಪಡೆದ ನಂತರ ಸದರೀ ವೆಂಕಟರಾವು ರಣನವರೆ ಯವರು ಪಾತೀಯಾಗಿ ಹೋದ್ದರಿಂದೆ ಅವರ ವಾರಸುದಾರರಾದ ಕುಟುಂಬ ಬಾಜೀಬಾಯಿ]ಅವರ ತಮ್ಮಂದರಾದ ರಘುನಾಥರಾವು ರಣನವರೆ 1 ಈ ಹರದೋ ಜನರೆ ಹೆಸರನ್ನು ರಿಜಿಸ್ಟರ್ ದಾಖಲ್ ಮಾಡಿಕೊಂಡು ಈ ಪಟ್ಟೆಯನ್ನು ಕೊಡಲಾಯಿತು.

R. VIJAYENDRA RAO,
For Offg. Dy. Commr.

Notice calling upon Dasokrishna of the Revenue Survey Department to present himself before the Hassan District Magistrate in order to answer the charge of bribery preferred by the ryots of the Honnamarnahalli village, Channarayapatna Taluk.

ಕಿ|| ಪ್ರೊ|| ಕೊಡು ೧೩೦ನೇ ಸೆಕ್ಷನ ಪ್ರಕಾರ ಹಾಸನ ಡಿಸ್ಟ್ರಿಕ್ಟ ಮೇಜಿಸ್ಟ್ರೇಟ ಸಾಹೇಬರವರ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,— ಚನ್ನರಾಯಪಟ್ಣ ತಾಲ್ಲೂಕು ಹೊನ್ನಮಾರನಹಳ್ಳಿಯನ್ನು ಪೋಜಣೀ ಮಾಡಿದ ಪೋಜಣೀದಾರ್ ದಾಸೋಕೃಷ್ಣಯಂಬುವನು ರುಪಾಯಿ ತೆಗದುಕೊಂಡದ್ದಾಗಿ ಯೆಂದಿರ್ಯಾದಿ ಪೆನ್ನಲ್‌ಕೋಡು 161ನೇ ಸೆಕ್ಷನ ಪ್ರಕಾರ ಛಾರ್ಜ್ ಅಪಾದನೆ ಮಾಡಿ ಆ ಗ್ರಾಮದ ರೈತರು ನಮ್ಮ ರೂಬರೂ ಫಿರ್ಯಾದು ಮಾಡಿರುವದ್ದರಿಂದ ಸದರಹೂ ದಾಸೇ ಕೃಷ್ಣಯೆಂಬವನ್ನ ದಸ್ತಗಿರೀಬಗ್ಗೆ ಈ ಕೋರ್ಟಿನಿಂದ ವಾರಂಟ್ ಕೊಟ್ಟರಲಾಗಿ ಆ ವಾರಂಟಿಗೆ ತಕ್ಕ ವಾರಂಟ್ ವಾಪಸ್ ಬಂದು ಇರುತ್ತದೆ, ಮತ್ತು ಸದರಿಯವನು ವಾರಂಟಿಗೆ ತಕ್ಕ ಹಾಗೆ ಕಂಡು ತಪ್ಪಿಸಿಕ್ಕೊಂಡು ಇರುವಹಾಗೆ ನಮ್ಮಿಗೆ ತೃಪ್ತಿಕರವಾಗಿ ತಿಳಿಯಬಂದು ಇರುವದ್ದರಿಂದ ಹುಕ್ಕುಂ ಮಾಡಿವದೇನಂದರೆ ಸದರಹೂ ದಾಸೇಕೃಷ್ಣಯೆಂಬುವನು ಈ ತಾರೀಖು ಲಾಗಾಯತು 30 ದಿವಸಗಳಲ್ಲಿ ಅಂದರೆ ಸ್ ೧೮೭೭ನೇ ಇಸವಿ ಜನವರೀ 20ನೇ ತಾರೀಖು ಅಥವಾ ಅದರ ಮಧ್ಯೆ ಕಾಲದಲ್ಲಿ ಹಾಜರಾಗಿ ಮೇಲ್ಕಂಡ ಫಿರ್ಯಾದಿಗೆ ಜವಾಬ್ ಕೊಡತಕ್ಕದ್ದು ಯೀದು ಇದರಿಂದ ತಿಳಿಯಪಡಿಸಿರುತ್ತೆ.

ತಾರೀಖು 20ನೇ ನವೆಂಬರ್ 1876ನೇ ಇಸವಿ ನೋಕ್ಕಂ ಶ್ರೀರಂಗಪಟ್ಣ, ತಾಲ್ಲೂಕು ಚನ್ನರಾಯಪಟ್ಣ,

E. P. MALTBY,
District Magistrate, Hassan.

SHIMOGA DISTRICT.

List of property stolen away from the house of Anantappa at Malé Sankargudda in the Shimoga District on the night of the 1st December 1876.

ಯಾದಾಸ್ತು ಸ್ ೧೮೭೬ನೇ ಇಸವಿ ಡಿಸಂಬರ್ ನವೆಂಬರ್ ತಾರೀಖು 2ನೇ ಆಯನೂರು ಮಾಗಣಿ ಮಲೆಶಂಕರ ಗುಡ್ಡದಲ್ಲಿ ಯಿರುವ ಶಂಕರ ದೇವಸ್ಥಾನದ ಅರ್ಚಕ ಶಂಕರಪ್ಪನ ಮಗ ಅನಂತಪ್ಪ ಹೆಚ್ ಬರೆದ ಜಿಂದಗೀ ತಪಶೀಲು ಈ ನವೆಂಬರ್ ಡಿಸಂಬರ್ 1ನೇ ತಾರೀಖಿನ ರಾತ್ರಿ ಸುಮಾರು 11 ಘಂಟೆ ಹೊತ್ತಿನಲ್ಲಿ ಯಾರೋ ಕಳ್ಳರು ಮನೆಯೊಳಗೆ ನುಗ್ಗಿ ಅನಂತಪ್ಪ ವಗೈರೆಯವರಿಗೆ ಹಿಂಸೆ ಮಾಡಿ ತೆಗದುಕೊಂಡ ಮಾಲ್‌ವಿವರ.

ಭಂಗಾರದ ಪುಂಗ್ರಾ 2 ಪೊಂದಕ್ಕೆ ಕೆಂಪುಯಮುನಾ ಹರಳು ಪಚ್ಚಿಕ್ಲ್ ಪೊಂದಕ್ಕೆ ಸಾಲಗ್ರಾಮದ ಕುಳ್ಳೆಯು ರೂ. ಆ ಹಚ್ಚಿಕೆ ಯಿದರ ಮೇಲೆ ರಾಮಪ್ಪಸನ್ನ ಯಂತ ಬಾಳಬಂದು ಬರಹದಲ್ಲಿ ಯಿದ್ದಹುದು ಯಿದರ ತೂಕ ವಗೈರೆ ಗೊತ್ತುಯಿಲ್ಲ	16	0
ಫಿರ್ಯಾದಿ ಮೇಲೆ ಇದ್ದದ್ದು ಸುಮಾರು ಕ್ರಯ		
ಜೊಕ್ಕಡಿಕೆ ಬಾಬತು ಪೊಂನೆಳೆ ಪುಡುಧಾರ ಸುಮಾರು 3 ವರಹಾ ತೂಕ ಆದೀತು ಕಿಮ್ಮತ್ತು ಫಿರ್ಯಾದಿ ಹೆಂಸತಿ ಹುವಮ್ಮನ ಮೈ ಮೇಲೆ ಇದ್ದದ್ದು.	10	0
ಭಂಗಾರದ ತಾಳಿ ಕರಿಮಣಿ ಯಿದರಲ್ಲಿ ಪೋಣಿಯಿದ್ದ ಭಂಗಾರದ ಗುಂಡು 32 ಕೊಳವೆ ಕುಸರೀ 2 ಹವಳ 3	14	0
ಭಂಗಾರದ ಗವರಕಂಠಿನಸರಾ 1ಕ್ಕೆ ಯಿದರಲ್ಲಿ ಪೋಣಿದ ಗುಂಡು 31	6	0
ಬೆಳ್ಳಿದುಂಡು 2 ರೂಪಾಯಿ ಮುರಿಸಿ ಮಾಡಿಸಿದ್ದು ಸುಮಾರು ಕ್ರಯ	1	8
ಭಂಗಾರದ ಕಡಗಪಾತ್ರೆ ಬಳೆ ಜೊತೆ 2 ತಾಂಬ್ರದ ತಗಡಿನವೇಲೆ ಭಂಗಾರ ಜೋಡಿಸಿದ್ದು ಸುಮಾರು 2 ವರಹಾತೂಕ ಅಂದಾಜು ಕ್ರಯ.	8	0
ಬೆಳ್ಳಿ ಬಾಬತು ಸುತ್ತು ಕಾಲುಂಗ್ರ ಜೊತೆ 1 ಸುಮಾರು ಕ್ರಯ ಅಡಗೆ ಕೋಣೆಯಲ್ಲಿ ಮಂಸಿನ ಮಗದುಲ್ಲಿ ಟ್ಟು ನೆಲದಲ್ಲಿ ಯಿಟ್ಟದ್ದು.	4	0
ಭಂಗಾರದ ಕಂಠೀಸರಾ 3 ಎಳೆ ಬಾಬತು 1 ತೂಕ ಗೊತ್ತಿಲ್ಲ ಯಿದರಲ್ಲಿ ಯಿರುವ ಗುಂಡು ಚೊಕ್ಕ ಸುಮಾರು ಕ್ರಯ.	40	0

ಭಂಗಾರದ ವಂಕಿ ಜೊತೆ 1 ಜೊಕ್ಕ ಭಂಡಾರ, ತೂಕ ವಗೈರೇ ಗೊತ್ತಿಲ್ಲ. .. .	40	0
ಭಂಗಾರದ ಹಿಂಬಳಿ ಜೊತೆ 2ಕ್ಕೆ ಜೊಕ್ಕ ಭಂಗಾರ, ತೂಕ ವಗೈರೆ ಗೊತ್ತಿಲ್ಲ.	20	0
ಭಂಗಾರದ ಪವಿತ್ರದ ವುಂಗ್ರ ಗೋಲು 1ಕ್ಕೆ ವರಹಾಬಂಣ.	4	0
ಬೆಳ್ಳಿ ತಾವೀಜ್ 2 ಯಿಪ್ಪೈಕಿ ವೊಂದರಲ್ಲಿ ಬೆಳ್ಳಿ ವೊಂದಾಣಿಗಳು ಯಿತ್ತು ಯಿಪ್ಪು ಯೆಂಬುವದು ಗೊತ್ತಿಲ್ಲ ವೊಂದರಲ್ಲಿ ಹಿಂದಲಕಾಲದ ಭಂಗಾರದ ನಾಣ್ಯ ಯಿಪ್ಪು ಯೆಂಬುವದು ನೆನಪುಯಿಲ್ಲ ಕಡವಿ ಮುರದ ಭರಣಿಯಲ್ಲಿ ಯಿತ್ತು.	20	0
ಭಂಗಾರದಲ್ಲಿ ನುತ್ತಿದ ಹವಳದ ಬೆಂಡಬೂವಲಿ ಜೊತೆ 1 ಯಿದಕ್ಕೆ ಹತ್ತಾಳಿ ಕೊಂಡಿ.	5	0
ಮೂವಿನಕಾಯಿ ಬಾವಲಿ ಮುತ್ತುನುತ್ತಿದ ಬಾಬತು ಜೊತೆ 1 ಯಿದರ ಅಂದಾಜು ಕ್ರಯ. ..	6	0
ಭಂಗಾರದ ಯನಗಳು ಜೋಡಿ.	3	0
ಹೊನ್ನುವು ಜೊತೆ 1ಕ್ಕೆ ಯಿದಕ್ಕೆ ನುತ್ತು ಮುತ್ತು ಬೆಗದಿಧೆ.	3	0
ಭಂಗಾರದ 5 ಕಳಕದ ಬಾಬತು ಬುಗಡಿ ಜೋಡಿ.	4	0
ಭಂಗಾರದ ಟೀಕಿ ವರಹಾ ಬಂಣದ ಬಾಬತು ನರ 1ಯಿದರ ಮಣಿ ಲೆಖ ಯಿಲ್ಲ ತೂಕ ಗೊತ್ತಿಲ್ಲ. ..	6	0
ಭಂಗಾರದ ಮೂಗ್ತಿ 1ಕ್ಕೆ ವೊಂದು ದೊಡ್ಡ ಮುತ್ತು ಯಿದೆ.	1	8
ಬೆಳ್ಳಿ ಪಟ್ಟಿ ಯಿದಕ್ಕೆ ನಡುಮಧ್ಯ ಪಸಿಗೆಯಿದೆ ಯಿದರ ತೂಕ ವಗೈರೆ ಗೊತ್ತಿಲ್ಲ.	6	0.

ಶಂಕರೇಶ್ವರ ದೇವರ ಮೇಲೆ ಯಿದ್ದ ಸಾವಾನು.

ಬೆಳ್ಳಿಮುಖ ಸುತ್ತೂ ಬೆಳ್ಳಿ ಸರಗಿಯಿಧೆ ಸುಮಾರು ½ ಸೇರು ತೂಕ ಆಗಬಹುದು.	8	0
ಬೆಳ್ಳಿನಾಗರ ಫಣಿತೂಕ ನೋಡಿಲ್ಲ.	3	0
ವುತ್ಸವ ಮೂರ್ತಿ ಬೆಳ್ಳಿಮುಖ ಭಂಗಾರದ ಕಂಣು 2 ಇದಕ್ಕೆ 2 ಕಿಡಿಹಾಕ್ಕಿಯಿಧೆ.	8	0
ಬೆಳ್ಳಿ ಜೋಡು ಛತ್ರಿ ಸೂರೇಪಾನ ವಗೈರೆ 5ಕ್ಕೆ ತೂಕ ಗೊತ್ತಿಲ್ಲ.	16	0
ನೆಟ್ಟಾನೆ ಕತ್ತಿ ವೊಂದು ಕಿನ್ಮುತು ಅಂದಾಜು.	0	8
ನಗದು ರೂಪಾಯಿ ಯಿನ್ನೂ ಮನೆಯಲ್ಲಿ ಚಿಲ್ಲರೆ ಸಾವಾನು ಯೇನಾದರೂ ಹೋಗಿರಬಹುದು ಯಿದು ನೋಡುವದಕ್ಕೆ ತ್ರಾಣವಿಲ್ಲ.	253	8

MAHOMED ALI,
For Offg. Dy. Commr.

ಸ್ರ 1876ನೇ ಇಸವಿ ನವಂಬರ್ ತಿಂಗಳ ಕಾಲಸ್ಥಿತೀ ರಿಪ್ಪೋರ್ಟು.

ಕಡೂರು ಡಿಸ್ಟ್ರಿಕ್ಟ್ಟು.

ಮಳೆ—ತರೀಕೆರೆ, ಲಕ್ಕುವಳ್ಳಿ, ಚಿಕ್ಕಮುಗಳೂರು ಈ ತಾಲ್ಲೂಕುಗಳಲ್ಲಿ ಸ್ವಲ್ಪವಾಗಿ ಮಳೆ ಯಾಯಿತು ಕೆರೆಗಳ್ಗೆಗೆ ನೀರು ಬರುವದಕ್ಕೆ ತಕ್ಕಷ್ಟಾಗಲಿ, ಫಸಲ್‌ಗಳಿಗೆ ವಳ್ಳೀ ಪ್ರಯೋಜನ ವುಂಟಾಗುವಷ್ಟಾಗಲಿ ಬೀಳಲಿಲ್ಲವು.

	ಅಂಗುಲ.	ಸೆಂಟಿಗಳು.		ಅಂಗುಲ.	ಸೆಂಟಿಗಳು.
ಅಕ್ಟೋಬರ್ 1876	0	70	ನವಂಬರ್ 1875	0	0
ನವಂಬರ್ 1876	0	60			

ಫಸಲ್ ಸ್ಥಿತಿ—ಕಡಲೆ, ಜೋಳ ಇವು ಚಿಕ್ಕಮುಗಳೂರು, ಬಾಣಾವಾರ ಈ ತಾಲ್ಲೂಕುಗಳಲ್ಲಿ ವೇರಾವಾದವು. ತರೀಕೆರೇ ತಾಲ್ಲೂಕಿನಲ್ಲಿ ವೇರಾವ್ ಆಗಿದ್ದ ಜೋಳ, ಕಡ್ಲೆ, ಕೊತ್ತಂಬರೀಬೀಜ ಇವುಗಳು ಒಣಗಿ ಹೋದವು. ಲಕ್ಕುವಳ್ಳಿ, ಕೊಪ್ಪ ತಾಲ್ಲೂಕುಗಳಲ್ಲಿ ಮಿಟ್ಟೈ ತಾಕು ಜಮ್ರಿಗಳ ತರೀ ಫಸಲ್ ಬಣಗಿ ಹೋದಂತೆ ಕಾಣುತದೆ ತಗ್ಗು ಭೂಮಿಗಳಲ್ಲಿ ಕಾಲವ್ಯತ್ಯಿ ಯಿಲ್ಲದ್ದರಿಂದ ಫಸಲ್‌ಗಳು ಚನ್ನಾಗಿಇಲ್ಲವು. ಲಕ್ಕುವಳ್ಳಿ, ಕೊಪ್ಪ ಈ ತಾಲ್ಲೂಕುಗಳೊಳಗಿರುವ ಭತ್ತದ ಫಸಲ್ ಪೈಕೀ ಕಾಲ್‌ಭಾಗ ಕಟುವಾಯ್ತಿತು. ಅಡಿಕೇ ಫಸಲ್ ಪೈಕೀ ಅರ್ಧಭಾಗವೂ, ಸದರೀ ತಾಲ್ಲೂಕುಗಳ ಕಾಫೀ ಫಸಲ್ ಪೈಕೀ ಅರ್ಧಭಾಗವೂ ಕಟುವಾಯಿತು. ಭತ್ತ, ಗನ್ನ ಇವು ಚಿಕ್ಕಮಗಳೂರಲ್ಲಿಯೂ ನಾವೆ, ಹುರಳಿ ಇವ್ವೆ ಬಾಣಾವಾರದಲ್ಲಿ ಕಟುವಾಗಿರುತವೆ. ಚಿಕ್ಕಮುಗಳೂರಲ್ಲಿ ಕಾಫೀ ಫಸಲ್ ಕೀಳ್ಪಡುತಿವೆ.

ಜನಾರೋಗ್ಯ—ಡಿಸ್ಟ್ರಿಕ್ಟ್ಟಿನ ಆರೋಗ್ಯ ಸ್ಥಿತಿ ಮಧ್ಯಸ್ಥವಾಗಿದೆ ತರೀಕೆರೆ, ಕೊಪ್ಪ, ಚಿಕ್ಕಮುಗಳೂರು ಈ ತಾಲ್ಲೂಕುಗಳಲ್ಲಿ ಛಳಿ ಜ್ವರ ತಗಲಿಯಿದೆ ಉಖಾಲ್ ಜ್ವರ ತಗಲಿಯಿದೆ ತರೀಕೆರೆ, ಬಾಣಾವಾರ ತಾಲ್ಲೂಕುಗಳ ಕೆಲವು ಗ್ರಾಮಗಳಲ್ಲಿ ಉಖಾಲ್ ಜ್ವರ ತಗಲಿತು ಡಿಸ್ಟ್ರಿಕ್ಟಿನ ಮೈದಾನ ಪ್ರದೇಶಗಳಲ್ಲಿರುವ ಬಡಜನಗಳು ಜೀವನಕ್ಕೆ ಸಂಪಾದಿಸಲಿಕ್ಕೆ ಬಹಳ ಕಷ್ಟಪಡುತ್ತಾರೆ.

ಈ ಸಂಕಟವನ್ನು ತಪ್ಪಿಸಲಿಕ್ಕೆ ಸರ್ವ ಪ್ರಯತ್ನವೂ ನಡೆಯುತಿದೆ. ಯಲ್ಲಾ ಕಾರಣದಿಂದಲೂ 303 ಮಂದಿ ಹೋಗಿರುತ್ತಾರೆ. 1875ನೇ ನವಂಬರ್ ತಿಂಗಳಲ್ಲಿ 292 ಮಂದಿ ಹೋದರು.

ದನಗಳಸ್ಥಿತಿ—ಲಕ್ಕುವಳ್ಳಿ, ಬಾಣಾವಾರ ಈ ತಾಲ್ಲೂಕುಗಳೊಳಗೆ ಗೋಮಾರೀ, ಕಾಲ್‌ಬಾಇ ಜ್ವರ ಇವು ವ್ಯಾಪಿಸಿಇವೆ. ಚಿಕ್ಕಮಗಳೂರು, ತೀರ್ಥಕೆರೆ, ಬಾಣಾವಾರ ಈ ತಾಲ್ಲೂಕುಗಳಲ್ಲಿ ದನಗಳಿಗೆ ಮೇವು ನೀರು ಇಲ್ಲದೆ ಬಹಳ ಬಾಧೆ ಪಡುತ ವೆ ಆದ್ದರಿಂದ ಬಹಳ ಕಾಲ್ನಡೆ ಹೋದವು. ಲಕ್ಕುವಳ್ಳಿ, ಕೊಪ್ಪ, ಬಾಣಾವಾರ ತಾಲ್ಲೂಕುಗಳಲ್ಲಿ ಕಾಡು ಮೃಗಗಳಿಂದ ಅನೇಕ ಕೊಲ್ಲಲ್ಪಟ್ಟವು. ಕುಲ್ 2401 ಕಾಲ್ನಡೆ ಸತ್ತು ಹೋದವು. ಕಳೆದ ತಿಂಗಳಲ್ಲಿ 1381 ಕಾಲ್ನಡೆ ಹೋದವು 1875ನೇ ನವಂಬರ್‌ನಲ್ಲಿ 1444 ಕಾಲ್ನಡೆ ಹೋದವು.

B. SRINIVASAIENGAR,
For Dy. Commr.

ಕರೆನ್ಸೀ ನೋಟ್‌ಗಳು.

ಯಿದರಡಿ ನಮೂದಿಸಲ್ಪಡುವ ಕರೆನ್ಸೀನೋಟುಗಳ ತುಕಡೇಗಳು ಹ್ಹೋಗಿವೆ.

ನಂಬರು.	ಸರ್ಕಲ್.	ಮೊಬಲಗ್.	
$\frac{B}{18}$ 79253	ಮದ್ರಾಸ್.	500	ಹಕ್ಕುದಾರ ಬೆಂಗಳೂರು ಚಿಕ್ಕಪೇಟೆಯಲ್ಲಿ ಪೆಣ್ಣೋ ಶಾಮಣ್ಣನವರೆ ಮನೆಯಲ್ಲಿರುವ ತಿಪಟೂರು ಹನುಮಂತಯ್ಯ.
$\frac{B}{50}$ 14698	ಡಿಟೋ	100	
$\frac{B}{50}$ 40663	ಡಿಟೋ	100	
$\frac{J}{3}$ 95100	ಮದ್ರಾಸ್ ಕ್ಯಾಲ್‌ಕಟ್	100	
$\frac{J}{3}$ 96006	ಡಿಟೋ	100	

ಯಿದರಡಿ ನಮೂದಿಸಲ್ಪಡುವ ಕರೆನ್ಸೀ ನೋಟುಗಳ ತುಕಡೇಗಳು ಬಳ್ಳಾರೀ ಜಿಲ್ಲಾ ಹರಪನಹಳ್ಳಿಗೆ ಟಪ್ಪಾಲ್ ದ್ವಾರ ರವಾನೇ ಆಗುವಲ್ಲಿ ಹೋಗಿರುತವೆ.

ನಂ.	ಸರ್ಕಲ್.	ಮೊಬಲಗ್.	ಹಕ್ಕುದಾರನ ಹೆಸರು.
$\frac{B}{44}$ 32732	ಮದ್ರಾಸ್	100	ಹೊನ್ನವಳ್ಳೀ ತಾಲ್ಲೂಕು ತಿಬಟೂರಲ್ಲಿರುವ ನೆಲ್ಲುಕುದರೆ ಮತಿಹಳ್ಳಿ ಚನ್ನವೀರಪ್ಪ.
,, 99172	ಡಿಟೋ	100	
$\frac{B}{50}$ 25604	ಡಿಟೋ	100	
,, 28748	ಡಿಟೋ	100	
,, 28800	ಡಿಟೋ	100	
,, 28801	ಡಿಟೋ	100	
,, 12049	ಡಿಟೋ	100	
$\frac{B}{43}$ 41085	ಡಿಟೋ	50	
,, 62690	ಡಿಟೋ	50	
,, 24772	ಡಿಟೋ	50	
,, 23762	ಡಿಟೋ	50	
,, 33307	ಡಿಟೋ	50	
68506	ಕಲ್ಲೀಕೋಟೆ	100	
59143	ಡಿಟೋ	20	

ತಿಪಟೂರಿನಿಂದ ಬೆಂಗಳೂರಿಗೆ ಅಂಚೇದ್ವಾರ ರವಾನೆ ಆಗುವಲ್ಲಿ ಇದರಡಿ ನಮೂದಿಸಲ್ಪಡುವ ಕರೆನ್ಸೀ ನೋಟುಗಳ ತುಕಡೆಗಳು ಹೋಗಿರುತವೆ.

ನಂಬರು.	ಸರ್ಕಲ್.	ಮೊಬಲಗ್.	
57141	ಮದ್ರಾಸ್	100	ಹಕ್ಕುದಾರ ತಿಪಟೂರಲ್ಲಿರುವ ಅರಳೇಕೆರೆ ವೆಂಕಟಯ್ಯ.
94178	ಡಿಟೋ	100	
28637	ಡಿಟೋ	5	
28644	ಡಿಟೋ	5	